
# ಫಕೀರ್ ಮೋಹನ್ ಸೇನಾಪತಿ

**ಆಧುನಿಕ** ಒರಿಯಾ ಗದ್ಯ ಸಾಹಿತ್ಯದ ಜನಕರೆಂದು ಹೆಸರಾಗಿರುವ ಫಕೀರ್ ಮೋಹನ್ ಸೇನಾಪತಿ 1843ರಲ್ಲಿ, ಬಾಲಸೋರ್ ಜಿಲ್ಲೆಯ ಮಲ್ಲಿಕಾಶ್‌ಪುರದಲ್ಲಿ ಜನಿಸಿದರು. ಸರಕಾರದ ಉಪ್ಪಿನ ಕಚೇರಿಯಲ್ಲಿ ಗುಮಾಸ್ತ, ತಮ್ಮ ದೊಡ್ಡಪ್ಪನ ವಹಿವಾಟಿನಲ್ಲಿ ಸಹಾಯಕ ಅಕೌಂಟೆಂಟ್, ಶಾಲಾ ಶಿಕ್ಷಕ, ಮುದ್ರಕ, ಪತ್ರಕರ್ತ, ರಾಷ್ಟ್ರೀಯವಾದಿ, ಒರಿಸ್ಸಾದ ಸಾಮಂತರ ರಾಜ್ಯಗಳಲ್ಲಿ ಆಡಳಿತಾಧಿಕಾರಿ, ಹೀಗೆ ನಾನಾ ಉದ್ಯೋಗಗಳಲ್ಲಿದ್ದ ಅವರು 1896ರಲ್ಲಿ ತಮ್ಮ 53ನೆಯ ವಯಸ್ಸಿನಲ್ಲಿ ನಿವೃತ್ತರಾದ ಮೇಲೆ ಬರೆಯತೊಡಗಿದರು. ಅವರ ಕೃತಿಗಳಲ್ಲಿ ನಾಲ್ಕು ಕಾದಂಬರಿಗಳು, ಒಂದು ಆತ್ಮವೃತ್ತಾಂತ ಮತ್ತು ಒಂದು ಕಥಾಸಂಕಲನ ಮುಖ್ಯವಾದವು. ನಾಲ್ಕು ಕಾದಂಬರಿಗಳಲ್ಲಿ 'ಛ ಮಣೊ ಅಥ ಗುಂಥ' (ಆರೂಮುಕ್ಕಾಲು ಎಕರೆ ಜಮೀನು) ಏಳು ಬಾರಿ ಇಂಗ್ಲಿಷಿಗೆ ಅನುವಾದಗೊಂಡಿದ್ದು, ಇನ್ನು ಕೆಲವು ತಿಂಗಳುಗಳಲ್ಲಿ ಎಂಟನೆಯ ಅನುವಾದವೂ ಬರಲಿದೆ. ಜೊತೆಗೆ ಇಂಗ್ಲಿಷಿನಲ್ಲಿ ಆಯ್ದ ಕತೆಗಳ ಒಂದು ಸಂಕಲನವೂ ಇದೆ.



ಫಕೀರ್ ಮೋಹನ್ ಸೇನಾಪತಿ



ಮನು ದಾಸ್

ಫಕೀರ್ ಮೋಹನ ಸೇನಾಪತಿಯವರು ಬರೆದದ್ದು ಒಟ್ಟು 21 ಕತೆಗಳನ್ನು. 1898ರಲ್ಲಿ ಪ್ರಕಟವಾದ ಅವರ ಮೊದಲ ಕತೆ 'ರೇವತಿ' ಆಧುನಿಕ ಒರಿಯಾ ಸಾಹಿತ್ಯದ ಮೊಟ್ಟ ಮೊದಲ ಸಣ್ಣಕತೆಯೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಹಾಗೆ ನೋಡಿದರೆ ಮುನ್ಷಿ ಪ್ರೇಮ್‌ಚಂದರು ಬರೆದ ಹಿಂದಿ ಭಾಷೆಯ ಮೊಟ್ಟಮೊದಲ ಕತೆ ಪ್ರಕಟವಾದದ್ದು 1907ರಲ್ಲಿ – ಒಂಬತ್ತು ವರ್ಷಗಳ ನಂತರ.

ಸೇನಾಪತಿಯವರ 'ರೇವತಿ' 35 ಭಾಷೆಗಳಿಗೆ ಭಾಷಾಂತರಗೊಂಡು, ಒಂದು ಸಂಕಲನವಾಗಿ ಈ ವರ್ಷ ಜೂನ್ ತಿಂಗಳಲ್ಲಿ ಹೊರಬರಲಿದೆ. ಇದೊಂದು ಬೃಹತ್ ಯೋಜನೆ. ಈ ಯೋಜನೆಯ ಸೂತ್ರಧಾರರು ಹೆಸರಾಂತ ಒರಿಯಾ ಕವಿ ಮನು ದಾಸ್. ಅವರು ಒದಗಿಸಿರುವ ವಿವರಗಳು ಅವರದೇ ಮಾತುಗಳಲ್ಲಿ:

“ಒಂದು ದಿನ ನಾನು ಒರಿಯಾ ಭಾಷೆಯ ಹಿರಿಯ ಲೇಖಕ ಕಮಲಾಕಾಂತ ಮಹಾಪಾತ್ರ ಅವರ ಜೊತೆ ಮಾತಾಡುತ್ತಿದ್ದಾಗ ಅವರು ತಮ್ಮಲ್ಲಿ 'ರೇವತಿ' ಕತೆಯ ಆರು ವಿದೇಶಿ ಭಾಷೆಗಳ ಅನುವಾದಗಳಿವೆಯೆಂದು ಹೇಳಿದ್ದಲ್ಲದೆ, ಆ ಅನುವಾದಗಳನ್ನು ನನಗೇ ಕೊಟ್ಟುಬಿಟ್ಟರು. ಆಗ ನನಗೆ ಒರಿಯಾದ ಈ ಮೊಟ್ಟ ಮೊದಲ ಕತೆಯನ್ನು ಇನ್ನಷ್ಟು ಭಾಷೆಗಳಿಗೆ ಅನುವಾದ ಮಾಡಿಸಿ ಒಂದು ಪುಸ್ತಕವನ್ನೇ ತಂದರೆ ಹೇಗೆ ಎಂದು ಅನ್ನಿಸಿತು. 'ಧೌಳಿ ಬುಕ್ಸ್' ಎಂಬ ಪ್ರಕಾಶನ ಸಂಸ್ಥೆಯನ್ನು ನಡೆಸುತ್ತಿರುವ ನಾನು ಕೂಡಲೇ ನನಗೆ ಗೊತ್ತಿದ್ದ ಹಾಗೂ ಇತರರ ಮೂಲಕ ಪರಿಚಿತರಾದ ಬೇರೆ ಬೇರೆ ಭಾಷೆಗಳ ಲೇಖಕರನ್ನು ಮತ್ತು ಅನುವಾದಕರನ್ನು ಸಂಪರ್ಕಿಸಿದೆ. ಅವರೆಲ್ಲರ ಪ್ರತಿಸ್ಪಂದನೆ ನಿಜಕ್ಕೂ